# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ

ಎಸ್‌ಸಿ ನಂ. 56/2022

ಸಿಡಬ್ಲು: 16 / ಪಿಡಬ್ಲು: 8

ದಿನಾಂಕ: 13.12.2024

**ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ಪರಮೇಶ ನಾಯಕ |
| ತಂದೆಯ ಹೆಸರು | : | ಶೇಲಪ್ಪ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸ ಸ್ಥಳ | : | ಹತ್ತಿಕಟ್ಟಿ ತಾಂಡಾ |

## ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರವರಿಂದ:

1. ಮೃತ ಸೋಮಲೆಪ್ಪ ನಾಯಕ ನನ್ನ ಅಣ್ಣನಿದ್ದನು. ಪ್ರಾಸಾ-1 ರವರು ಸದರಿ ಸೋಮಲೆಪ್ಪ ನಾಯಕನ ಹೆಂಡತಿ ಇರುತ್ತಾಳೆ. ನನಗೆ ಪ್ರಾಸಾ-5, ಚಾಸಾ-10 ರಿಂದ 13 ರವರು ನನಗೆ ಪರಿಚಯ ಇರುತ್ತಾರೆ. ಪ್ರಾಸಾ-10 ರವರು ನನ್ನ ಅಕ್ಕನ ಮಗನಿರುತ್ತಾನೆ. ಪ್ರಾಸಾ-7 ರವರು ನನ್ನ ತಮ್ಮ ಇರುತ್ತಾರೆ.

2. ನ್ಯಾಯಾಲಯದ ವಿ.ಸಿ.ಯಲ್ಲಿ ಕಾಣಿಸುವ ಆರೋಪಿ ನನಗೆ ಪರಿಚಯ ಇರುತ್ತಾನೆ. ಆರೋಪಿ ನನ್ನ ಅಣ್ಣನಾದ ಸೋಮಲೆಪ್ಪ ನಾಯಕನನ್ನು ಕೊಲೆ ಮಾಡಿರುತ್ತಾನೆ. ಸದರಿ ಸೋಮಲೆಪ್ಪ ನಾಯಕ ಇವರು ಹತ್ತಿಕಟ್ಟಿ ತಾಂಡಾದಲ್ಲಿ ನ್ಯಾಯ ಬಗೆಹರಿಸುವ ಕೆಲಸವನ್ನು ಮಾಡುತ್ತಿದ್ದರು.

3. ಆರೋಪಿಗೆ ಮದುವೆಯಾಗಿ ಮಕ್ಕಳು ಇರುತ್ತಾರೆ. ಆರೋಪಿ ಮತ್ತು ಆತನ ಹೆಂಡತಿಯ ಸಂಸಾರ ಚೆನ್ನಾಗಿರಲಿಲ್ಲ. ಆತನ ಹೆಂಡತಿಯು ಆರೋಪಿಯೊಂದಿಗೆ ವೈಮನಸ್ಸು ಮಾಡಿಕೊಂಡು ತನ್ನ ತವರು ಮನೆಗೆ ಹೋಗಿ ವಾಸ ಮಾಡಿಕೊಂಡಿದ್ದಳು.

4. ಆರೋಪಿಯು ತನ್ನ ಸಂಸಾರವನ್ನು ಸರಿ ಮಾಡಿಕೊಡು ಎಂದು ಮೃತ ಸೋಮಲೆಪ್ಪ ನಾಯಕ ಇವರನ್ನು ಕೇಳುತ್ತಿದ್ದರು. ಆಗ ಹಿರಿಯರು ಎಲ್ಲರೂ ಸೇರಿ ಆರೋಪಿಯ ಸಂಸಾರವನ್ನು ಸರಿ ಮಾಡಲು ಪ್ರಯತ್ನಪಟ್ಟಿದ್ದರು. ಆದರೂ ಕೂಡಾ ಆತನ ಸಂಸಾರ ಸರಿ ಹೋಗಿರಲಿಲ್ಲ. ಆದ್ದರಿಂದ

ಆರೋಪಿಯು ಸದರಿ ಸೋಮಲೆಪ್ಪ ನಾಯಕ ಇವರ ಮೇಲೆ ಸಿಟ್ಟು ಇಟ್ಟುಕೊಂಡಿದ್ದನು.

5. ಈಗ ಸುಮಾರು ಎರಡು ವರ್ಷಗಳ ಹಿಂದೆ, ಒಂದು ದಿನ ನಾನು ಗೋವಾದಲ್ಲಿದ್ದಾಗ, ರಾತ್ರಿ 10.00 ಗಂಟೆ ಸಮಾರಿಗೆ ನಮ್ಮ ಮನೆಯವರು ನನಗೆ ಫೋನ ಮಾಡಿ, ಸೋಮಲೆಪ್ಪ ನಾಯಕ ಇವರನ್ನು ಆರೋಪಿಯು ಸೇವಾಲಾಲ ದೇವಸ್ಥಾನದಲ್ಲಿ ಕೊಲೆ ಮಾಡಿರುತ್ತಾನೆ ಮತ್ತು ಶವ ಗದಗನ ಜಿಲ್ಲಾ ಆಸ್ಪತ್ರೆಯಲ್ಲಿ ಇರುತ್ತದೆ ಎಂದು ತಿಳಿಸಿರುತ್ತಾರೆ.

6. ವಿಷಯ ತಿಳಿದು ನಾನು ಗೋವಾದಿಂದ ನೇರವಾಗಿ ಹತ್ತಿಕಟ್ಟಿ ಗ್ರಾಮಕ್ಕೆ ಬಂದಿರುತ್ತೇನೆ. ಆಗ ನಮ್ಮ ಮನೆಯ ಹತ್ತಿರ ಜನರು ಸೇರಿದ್ದರು. ನಾನು ಸದರಿ ಸೇವಾಲಾಲ ದೇವಸ್ಥಾನಕ್ಕೆ ಹೋಗಿ ನೋಡಿದಾಗ, ಸದರಿ ದೇವಸ್ಥಾನದ ಕಂಬದ ಹತ್ತಿರ ರಕ್ತ ಆಗಿತ್ತು. ಆಗ ನಾನು ಅಲ್ಲೇ ಇದ್ದ ಚಾಸಾ-10 ರವರನ್ನು ವಿಚಾರಿಸಿದಾಗ, ಚಾಸಾ-10 ರವರು ತಾನು, ಚಾಸಾ-11, 12, 13 ಮತ್ತು ಮೃತ ಸೋಮಲೆಪ್ಪ ನಾಯಕ ಸೇರಿ ಸದರಿ ಸೇವಾಲಾಲ ದೇವಸ್ಥಾನದ ಉದ್ಘಾಟನೆ ಮಾಡುವ ಬಗ್ಗೆ ಮಾತನಾಡಲು ಸೇರಿದ್ದಾಗಿ, ಆ ಸಮಯದಲ್ಲಿ ಆರೋಪಿಯು ಅಲ್ಲಿಗೆ ಬಂದು, ಮೃತ ಸೋಮಲೆಪ್ಪನಿಗೆ ತನ್ನ ಸಂಸಾರವನ್ನು ಸರಿ ಮಾಡು ಎಂದು ಹೇಳಿದರೆ, ನನ್ನ ಸಂಸಾರವನ್ನು ಸರಿ ಮಾಡಲು ಆಗಲಿಲ್ಲ, ದೇವಸ್ಥಾನದ ಕೆಲಸವನ್ನು ಏನು ಮಾಡುತ್ತೀ ಎಂದು ಹೇಳಿ, ಚಾಕುವಿನಿಂದ ಆತನ ಕುತ್ತಿಗೆಗೆ, ಹೊಕ್ಕಳಕ್ಕೆ, ಕೈಗೆ ಮತ್ತು ಮರ್ಮಾಂಗಕ್ಕೆ ಚುಚ್ಚಿ ಗಾಯಪಡಿಸಿರುತ್ತಾನೆ ಮತ್ತು ಆರೋಪಿ ಹತ್ತಿರ ಇದ್ದ ಇನ್ನೊಂದು ಚೂರಿಯನ್ನು ಚಾಸಾ-13 ರವರು ಕಸಿದುಕೊಂಡಿರುತ್ತಾರೆ ಮತ್ತು ಈ ಎಲ್ಲಾ ಘಟನೆಯಾದಾಗ ಸಮಯ ರಾತ್ರಿ 08.30 ಗಂಟೆ ಆಗಿತ್ತು ಎಂದು ಹೇಳಿರುತ್ತಾರೆ.

7. ನಂತರ ಪ್ರಾಸಾ-1, 5 ರವರು ಸೇರಿ ಪ್ರಾಸಾ-5 ರವರ ಬೋಲೇರೋ ವಾಹನದಲ್ಲಿ ಸೋಮಲೆಪ್ಪ ನಾಯಕನನ್ನು ಗದಗ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿ ವೈದ್ಯರು ಪರೀಕ್ಷೆ ಮಾಡಿ, ಸೋಮಲೆಪ್ಪ ನಾಯಕ ಮೃತಪಟ್ಟಿರುತ್ತಾನೆ ಎಂದು ಹೇಳಿರುತ್ತಾರೆ.

8. ಈ ಘಟನೆಯ ಬಗ್ಗೆ ಪ್ರಾಸಾ-1 ರವರು ಪೋಲೀಸರಿಗೆ ದೂರನ್ನು ಕೊಟ್ಟಿರುತ್ತಾರೆ. ದೂರನ್ನು ಕೊಟ್ಟ ನಂತರ ಪೋಲೀಸರು ಸೋಮಲೆಪ್ಪ ನಾಯಕ ಮೃತಪಟ್ಟ ಮಾರನೇ ದಿನ ಸದರಿ ಸೇವಾಲಾಲ ದೇವಸ್ಥಾನಕ್ಕೆ ಬಂದಿದ್ದು, ಆಗ ಪೋಲೀಸರಿಗೆ ಸ್ಥಳವನ್ನು ನಾನು ತೋರಿಸಿರುತ್ತೇನೆ. ಸದರಿ ಸ್ಥಳದಲ್ಲಿ ಪೋಲೀಸರು ಸ್ಥಳವನ್ನು ಪರಿಶೀಲನೆ ಮಾಡಿ, ಪಂಚರಾದ ಪ್ರಾಸಾ-2 ಮತ್ತು ಚಾಸಾ-3 ರವರ ಸಮಕ್ಷಮ ಪಂಚನಾಮೆಯನ್ನು ಮಾಡಿರುತ್ತಾರೆ. ಆ ಕಾಲಕ್ಕೆ ನಿಪಿ-2 ಮತ್ತು 3 ರಂತೆ ಫೋಟೋಗಳನ್ನು ತೆಗೆಯಲಾಗಿರುತ್ತದೆ. ನಿಪಿ-2 ಮತ್ತು 3 ರಲ್ಲಿ ಕ್ರಮ ಸಂಖ್ಯೆ: 2 ರಲ್ಲಿ ನನ್ನ ಭಾವಚಿತ್ರಗಳು ಇರುತ್ತದೆ. ಈಗ ಸದರಿ ಪಂಚನಾಮೆಯನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-4 ಎಂದು

ಗುರುತಿಸಲಾಗಿರುತ್ತದೆ. ನಿಪಿ-4 ಕ್ಕೆ ಪೋಲೀಸರು ನನ್ನ ಹೆಬ್ಬಟ್ಟಿನ ಗುರುತನ್ನು ಮಾಡಿಸಿಕೊಂಡಿರುತ್ತಾರೆ.

9. ಸ್ಥಳದಲ್ಲಿ ಬಿದ್ದಿದ್ದ ರಕ್ತವನ್ನು ಪೋಲೀಸರು ಅರಳಿಯಿಂದ ತೆಗೆದು, ಪಾಕೀಟಿನಲ್ಲಿ ಹಾಕಿ ಕೊಂಡಿರುತ್ತಾರೆ. ಸದರಿ ಪೋಲೀಸರು ತೆಗೆದುಕೊಂಡಿರುವ ರಕ್ತವನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸದರಿ ರಕ್ತವನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ಮು.ಮಾ.5 ಎಂದು ಗುರುತಿಸಲಾಗಿರುತ್ತದೆ.

10. ಪೋಲೀಸರು ಸ್ಥಳಕ್ಕೆ ಬಂದಾಗ, ಸಮಯ ಬೆಳಿಗ್ಗೆ 10.00 ಗಂಟೆಯ ಮೇಲೆ ಆಗಿತ್ತು ಮತ್ತು ಪೋಲೀಸರು ಅಲ್ಲಿ 2 – 3 ತಾಸುಗಳ ವರೆಗೆ ಇದ್ದರು. ಸದರಿ ಅವಧಿಯಲ್ಲಿ ನಿಪಿ-4 ಪಂಚನಾಮೆಯನ್ನು ಮಾಡಲಾಗಿರುತ್ತದೆ.

## ಪಾಟಿ ಸವಾಲುಃ ಶ್ರೀ ಸಿ.ಎಸ್. ಸಂಕನಗೌಡರ, ಆರೋಪಿ ಪರ ವಕೀಲರಿಂದಃ

**(ಶ್ರೀಮತಿ ಆರ್.ಹೆಚ್. ಕೊಣ್ಣೂರ ವಕೀಲರು, ಶ್ರೀ ಸಿ.ಎಸ್. ಸಂಕನಗೌಡರ ವಕೀಲರು ಬೇರೆ ಊರಿಗೆ ಹೋಗಿರುವುದಾಗಿ ಹೇಳಿ ಪಾಟಿ ಸವಾಲಿಗೆ ಸಮಯ ಕೋರಿದ್ದು, ಅವರ ಪ್ರಾರ್ಥನೆಯನ್ನು ತಿರಸ್ಕರಿಸಿ, ಪಾಟಿ ಸವಾಲು ಏನೂ ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಗದಗ**